doc-412
T.P-2

R No KRNN 12

5-12-1974

in ★★★★★ 58 th Year ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

- For Influential Publicity -

ಸ್ವಾಮಿ ಪತ್ರಿಕೆ: ಆರಮನೆ ಹಿರಿಸ್ಕೆಟ್ಟಾರ್ ಎಂ. ವಿ. ಸುಬ್ಬಾರಾವ್ ಸಂಪಾದಕರು: ಧರ್ಮಪ್ರಚಾರಪರಿವ ಎಂ. ಎಸ್. ಕೃಷ್ಣರಾವ್ [3 ಕೆ.ಪಿ

ವಿದ್ಯಾರ್ಥಿಗಳಿಂದ ಮುಷ್ಕರ ಬೆದರಿಕೆ

ಹಾಜಿ ಯಾತ್ರಿಕನಿಂದ

ಬೊಂಬಾಯಿ— ಇಲ್ಲಿಗೆ ಮಹಮೂದಿ ಹಡಗಿನಿಂದ ಮಾರಿಷಸ್‌ನ ಒಬ್ಬ ಹಾಜಿ ಯಾತ್ರಿಕನಿಂದ ಕಸ್ಟಂಸರರು ರೂ 1.33 ಲಕ್ಷ ಬೆಲೆಯ ಟಾನ್ಸಿಸ್ಟರುಗಳು, ಕಾಸೆಟ್ ಟೇಪ್‌ರೆಕಾರ್ಡರುಗಳನ್ನು ವಶವಡಿಸಿಕೊಂಡು ಬಂಧಿಸಿದರು – ಆತನನ್ನು ಮ್ಯಾಜಿಸ್ಟ್ರೇಟರು ಜಾಮೀನಾನು ಮೇಲೆ ಬಿಡುಗಡೆ ಮಾಡಿದರು

★

ಟಿಕೀಟುಗಳಿಲ್ಲಾ ಮಾರಾಟವಾದವು

ನವದೆಹಲಿ— ಇಲ್ಲಿ ತಾ॥ 11 ರಂದು ಪ್ರಾರಂಭವಾಗುವ ವೆಸ್ಟ್‌ಇಂಡೀಸ್-ಭಾರತ ಕ್ರಿಕೆಟ್ ಪಂಥದ ಎಲ್ಲಾ ವರ್ಗದ ಸೀಸನ್ ಟಿಕೀಟುಗಳೂ ಪಂಥ ಪ್ರಾರಂಭ ದಿನಕ್ಕೆ 9 ದಿನಗಳ ಮುಂಚೆಯೇ ಮಾರಾಟವಾಗಿವೆ – ಇನ್ನು ಆಯಾ ದಿನಗಳ ಟಿಕೀಟುಗಳ ಮಾರಾಟವಿಲ್ಲವೆನ್ನಲಾಗಿದೆ

★

ನಿರಾಕರಣೆ

ಚಂಡಿಘರ್— ನವೆಂಬರು 27 ರಂದು ಕರ್ನಾಲಿನಲ್ಲಿ ಜಯಪ್ರಕಾಶರಮೇಲೆ ಹಲ್ಲೆ ನಡೆಸಿ ಕೊಲೆ ಪ್ರಯತ್ನ ನಡೆಸಲಾಯಿತೆಂಬ ಆಪಾದನೆಯನ್ನು ಶಾಸನ ಸಭೆಯಲ್ಲಿ ಸರಕಾರ ನಿರಾಕರಿಸಿತು

★

ಹೈಕೋರ್ಟುಗಳಲ್ಲಿ ಹಳೇ ಮೊಖದ್ದಮೆ

ನವದೆಹಲಿ— ಕೆಲವು ಹೈಕೋರ್ಟುಗಳಲ್ಲಿ ಸ್ವಾತಂತ್ರ್ಯ ಸಂಚಿನ, ಎರಡನೇ ಯುದ್ಧಕ್ಕೆ ಮುಂಚಿನ ಮೊಖದ್ದಮೆಗಳು ಇನ್ನೂ ಇವೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು – ಅತಿ ಹಳೆಯುದೆಂದರೆ ಕಲ್ಕತ್ತಾ ಹೈಕೋರ್ಟಿನಲ್ಲಿ 1938 ರಿಂದಿರುವುದು ; ಮದ್ರಾಸು ಹೈಕೋರ್ಟಿನಲ್ಲಿ 1940 ರಿಂದ, ಅಲಹಾದಿನಲ್ಲಿ 1944 ರಿಂದ, ಬೊಂಬಾಯಿನಲ್ಲಿ 1946 ರಿಂದ, ಕರ್ನಾಟಕದಲ್ಲಿ 1956 ರಿಂದ ಇವೆ

ಮುಷ್ಕರದ ಬೆದರಿಕೆ

ಬಳ್ಳಾರಿ— ಸರಕಾರವು ಅವಶ್ಯ ಪದಾರ್ಥಗಳ ಬೆಲೆ ಹೋಟಲುಗಳಲ್ಲಿ ತಿಂಡಿ ಬೆಲೆ, ಏನಾದ್ರೂ ದರ ತಗ್ಗಿಸುವ ಮಾರ್ಗ ಕೈಗೊಳ್ಳುವದರಲ್ಲಿ ವಿಫಲಗೊಂಡರೆ ತಾ॥ 12 ರಿಂದ ಮುಷ್ಕರ ಹೂಡುವುದಾಗಿ ಕಾಲೇಜು ವಿದ್ಯಾರ್ಥಿಗಳು ಬೆದರಿಕೆ ಹಾಕಿರುವರು.

★

ಜೋಳ ಜಪ್ತಿ

ಹುಬ್ಬಳ್ಳಿ– ತಾವು ರೈತರಿಂದ ಕೊಂಡು ಕೊಂಡುದೆಂಬ ಜೋಳದ ಬಗ್ಗೆ ಲೆವಿ ಪಾವತಿ ಸರ್ಟಿಫಿಕೇಟು ಹಾಜರ್ಪಡಿಸದಿದ್ದರಿಂದ 17 ಧಾನ್ಯ ವರ್ತಕರಿಗೆ ಸೇರಿದ ಹತ್ತಿ ಮಾರುಕಟ್ಟೆಯಲ್ಲಿದ್ದ 844 ಚೀಲ ಜೋಳವನ್ನು ತಾಸಿಲ್ದಾರರು ಜಪ್ತಿ ಮಾಡಿದರು.

★

ವಿಚಾರಣೆಗೆ ಕೇಳಿಕೆ

ನವದೆಹಲಿ— ಕಲ್ಲಿದ್ದಲು ಗಣಿಕೆಗಾರರೊಡನೆ ರಾಜಕೀಯ ನಾಯಕರ ಮತ್ತು ಸರಕಾರಿ ಅಧಿಕಾರಿಗಳ ಸಂಪರ್ಕ ಬಗ್ಗೆ ವಿಚಾರಣೆಗೆ ಸುಪ್ರೀಂ ಕೋರ್ಟಿನ ಜಡ್ಜರ ನೇತೃತ್ವದಲ್ಲಿ ಒಂದು ಉನ್ನತ ಅಧಿಕಾರದ ಕಮಿಷನ್ ನೇಮಿಸಲು ಜನಸಂಘದ ನಾಯಕ ಶ್ರೀ ವಾಜಪೇಯಿಯವರು ಲೋಕ ಸಭೆಯಲ್ಲಿ ಕೇಳಿಕೆ ಹಾಕಿದರು.

★

ವಾರ್ತಾ ಇಲಾಖಾ ನಿರ್ದೇಶಕರು

ಹುಬ್ಬಳ್ಳಿ— ಉತ್ತರ ಕನ್ನಡಾ ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಿರುವ ವಾರ್ತಾ ಮತ್ತು ಪ್ರಚಾರ ಇಲಾಖಾ ನಿರ್ದೇಶಕರು ಶ್ರೀ ಬಿ. ಜಿ. ಕುಲಕರ್ಣಿಯವರು, ಪತ್ರಿಕೆಯವರೊಡನೆ ಮಾತನಾಡುತ್ತಾ, ಸರಕಾರಿ ಚಟುವಟಿಕೆಗಳ ವಾರ್ತೆ ಜನತೆಗೆ ತಲಪುವ ರೀತಿಯಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯನ್ನು ಪುನರ್ವ್ಯವಸ್ಥೆ ಮಾಡಲಾಗುವುದೆಂದು ತಿಳಿಸಿದರು.

ಮಂತ್ರಿ ಮಗಳ ಸಾವು

ನೋಗಾ— ಪಂಜಾಬಿನ ಸಾರಿಗೆ ಮಂತ್ರಿ ಶ್ರೀ ದಿಲ್ಬಾಗ್ ಸಿಂಗ್‌ರ ಹೊಸದಾಗಿ ಮದುವೆಯಾದ ಮಗಳು, ಅವಳ ಗಂಡ, ಅವರ ಅಳಿಯ ಕಾರ್‌ನಲ್ಲಿ ಹೋಗುತ್ತಿದ್ದಾಗ ಒಂದು ಸಾರಿಗೆ ಇವರ ಕಾರು ಡಿಕ್ಕಿ ಹೊಡೆದು, ಮೂವರೂ ಮೃತಪಟ್ಟರು

●

ಪಾನನಿರೋಧ

ಬೆಂಗಳೂರು— ಕರ್ನಾಟಕದಲ್ಲಿ ಪಾನ ನಿರೋಧವನ್ನು ಪುನರ್ಜಾರಿಗೆ ತರುವಂತೆ ತಮ್ಮ ಪ್ರಭಾವ ಬೀರಬೇಕೆಂದು ಒತ್ತಾಯ ಮಾಡುವ ಮನವಿಪತ್ರವನ್ನು ಕಾಂಗ್ರೆಸ್ ಅಧ್ಯಕ್ಷ ಶ್ರೀ ಬರುವಾರಿಗೆ ಮನವಿಪತ್ರ ಕೊಡಲಾಯಿತು

ಬಡತನ

ನವದೆಹಲಿ— ಭಾರತದಲ್ಲಿ ಶೇಕಡ 40 ಮಂದಿ ಅಥವಾ 220 ಮಿಲಿಯ ಜನ ಬಡತನದ ರೇಖೆಯ ಕೆಳಗೆ ಜೀವಿಸುತ್ತಿರುವರೆಂದು ಪ್ರಕಟವಾಗಿದೆ.

★

ಶಾಸನಸಭೆ

ಬೆಂಗಳೂರು— ರಾಜ್ಯದ ಶಾಸನಸಭೆಯ ಬಜೆಟ್ ಅಧಿವೇಶನವು ಫೆಬ್ರವರಿ 18 ರಿಂದ ನಡೆಯುವಂತೆ ಹಂಗಾಮಿಯಾಗಿ ನಿಶ್ಚಯಿಸಲಾಗಿದೆ – ಅದಕ್ಕೆ ಮುಂಚೆ ತಾಲ್ಲೂಕು ಬೋರ್ಡು ಚುನಾವಣೆ ಮುಗಿಸಲು ಸರಕಾರದ ಇಚ್ಛೆಯಾಗಿದೆ

★

2175 ಉಪಾಧ್ಯಾಯರು

ಬೆಂಗಳೂರು— ಎರಡು ವರ್ಷಗಳ ಕಾಲಕ್ಕೆ ತಿಂಗಳಿಗೆ ರೂ 150 ಸಂಬಳದ ಮೇಲೆ 2175 ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ತೆಗೆದುಕೊಳ್ಳಲು ಯೋಜಿಸಿದೆ

ಅಮೂಲ್ಯ ವಿಗ್ರಹ ವಶ

ಮದರಾಸು— ಬೊಂಬಾಯಿಗೆ ಹೊರಟಿದ್ದ ಇಬ್ಬರಿಂದ ಸೆಂಟ್ರಲ್ ಸ್ಟೇಷನ್ನಿನಲ್ಲಿ ರೂ 3 ಲಕ್ಷ ಬೆಲೆಯ ಪಂಚಲೋಹದ ವಿಗ್ರಹವನ್ನು ವಶಪಡಿಸಿಕೊಂಡು ಅವರನ್ನು ತನಿಖೆಗಾಗಿ ನಿಲ್ಲಿಸಿಕೊಂಡರು – ಪೆರಗಾವಸರ್ಡ ಶಿವಾಲಯದಲ್ಲಿ ಇದನ್ನು ಕದ್ದುದಾಗಿ ಆಪಾದಿಸಲಾಗಿದೆ

★

ತರಬೇತಿ ಶಿಬಿರ

ಬೆಂಗಳೂರು– ದೊಡ್ಡ ಬಳ್ಳಾಪುರದಾಚೆ ಬೆಸಂಟ್ ಪಾರ್ಕ್‌ನಲ್ಲಿ ಕೆಪಿಸಿ ತರಬೇತಿ ಶಿಬಿರ ಸುತ್ತ ರಕ್ಷಣಾ ವ್ಯವಸ್ಥೆ ಬಲವಾಗಿದೆ; ಶಿಬಿರಕ್ಕೆ ಹೋಗುವ ಮುಖ್ಯ ದ್ವಾರ ಮುಚ್ಚಲ್ಪಟ್ಟು ಸೇವಾದಳದ ಸ್ವಯಂಸೇವಕರು ಬಲಪಾದ ಪೋಲೀಸರ ರಕ್ಷಣಾ ಸಾಲಿಗೆ ಬೆಂಬಲಿಸಿದಾರೆ

★

ಲೆವಿ ಪ್ರತಿಭಟನೆ

ಜಯಪುರ— ಬುಂದಿಯಲ್ಲಿ ಕಾರಿಫ್ ಬೆಳೆಯ ಮೇಲಿನ ಲೆವಿಗೆ ಪ್ರತಿಭಟಿಸಿ ಕಲೆಕ್ಟರು ಕಛೇರಿಗೆ ಪ್ರವೇಶಿಸಲು ಪ್ರಯತ್ನಿಸಿದ 2000 ಜನರ ಗುಂಪನ್ನು ಚದುರಿಸಲು ಪೋಲೀಸರು ಅಶ್ರುವಾಯು ಮತ್ತು ಲಾಠಿ ಪ್ರಯೋಗಿಸಿದರು – ಪ್ರತಿಭಟನಾ ನೇತೃತ್ವವನ್ನು ಜನಸಂಘದ ನಾಯಕರು ವಹಿಸಿಕೊಂಡಿದ್ದರು.

★

ಕಳ್ಳಸಾಗಾಣಿಕೆ ಪದಾರ್ಥಗಳು

ಬೊಂಬಾಯಿ ಬೇವಿನ ದೂರದಲ್ಲಿ ಕಸ್ಟಂರವರು ಹಿಡಿದ ಒಂದು ಅರಬ್ ಹಡಗಿನಿಂದ ರೂ 12 ಲಕ್ಷ ಕಳ್ಳಸಾಗಾಣಿಕೆ ಪದಾರ್ಥಗಳು ಸಿಕ್ಕಿವೆ.

★

ನವದೆಹಲಿ– ಕಾರ್ಪೋರೇಷನ್ ತೆರಿಗೆ ಮತ್ತು ಆದಾಯ ತೆರಿಗೆಗಳು, ಬಡ್ಡಿ ರೂ. 117 ಕೋಟಿ ಸೇರಿ ರೂ.800 84 ಕೋಟಿ ಬಾಕಿ ಇರುವದೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ಜೋಡೆತ್ತಿನಿಂದ ದನಕರುಗಳು

ನವೆಂಬರು ನಡೆದುಹೋಯಿತು ; ಅದು ಹೊಸದಲ್ಲ ; ಆದರೂ ಎಂಟು ವರ್ಷಗಳ ಹಿಂದಿನ ನವೆಂಬರು ತಿಂಗಳನ್ನು ಈ ನವೆಂಬರು ನೆನಪಿಗೆ ತಂದಿದೆ ; 1966 ರ ನವೆಂಬರಿನಲ್ಲಿ, ದಿಲ್ಲಿಯಲ್ಲಿ ಗೋವಧೆಯನ್ನು ತಡೆಯಿರೆಂದು ಮಠ–ಸಂಪ್ರದಾಯ ವಗೈರೆಗಳನ್ನು ಮರೆತು, ಸಾಧುಸನ್ಯಾಸಿಗಳು ಒಂದಾಗಿ ನಿಂತು ದಿಲ್ಲಿ ದೇವತೆಗಳ ಬಳಿ ಕೇಳಿಕೊಂಡರು , ದಿಲ್ಲಿ ದೇವತೆಗಳಿಗೆ ದಯೆ ಬರಲಿಲ್ಲ ; ಅವರು ಸಾಧು ಸನ್ಯಾಸಿಗಳನ್ನು ದೂಷಿಸಿದರು ; ಅವರ ಮೇಲೆ ಅಲ್ಲಸಲ್ಲದ ಆರೋಪಗಳನ್ನು ಹೊರಿಸಿದರು ; ಅಷ್ಟೇ ಅಲ್ಲ ; ನ್ಯಾಯಾಲಯಕ್ಕೆಳೆದುಕೊಂಡು ಹೋದರು : ಆ ಸಮಯದಲ್ಲಿ ರಾಜಧಾನಿಯಲ್ಲಿ ಇಲ್ಲದೇ ಇದ್ದ ಮಹಾಪುರುಷರನ್ನೂ ವೇದಿಕೆಯ ಮೇಲೆ ಕಂಡರು ! ಆ ಮೇಲೆ ಬಿಸಿತಟ್ಟಿದಾಗ ಕ್ಷಮೆಬೇಡಿದರು ಈ ಚಳವಳಿಯನ್ನು ಹತ್ತಿಕ್ಕಲು ರಾಜದಂಡಕ್ಕೆ ಸಾಧ್ಯವಾಗಲಿಲ್ಲ ; ಬ್ರಹ್ಮದಂಡ ಶಾಂತವಾಗಿ ದೃಢವಾಗಿ ನಿಂತುಕೊಂಡಿದೆ ; ಚಳುವಳಿ ಶಾಂತವಾಗಿ ಸಾಗುತ್ತಿದೆ. ದಿಲ್ಲಿ ದೇವತೆಗಳು ಆರೋಪಿಗಳೆಂದು ದೂಷಿಸಿದವರನ್ನು ನ್ಯಾಯಾಧೀಶರು ನಿರ್ದೋಷಿಗಳೆಂದು ಸಾರಿರುತ್ತಾರೆ. ಸಾಧುಗಳು ಗೋಹತ್ಯೆಯನ್ನು ಪ್ರತಿಬಂಧಿಸಿರೆಂದು ಶಂಖದನಿದುರು ಪ್ರದರ್ಶನ ನಡೆಸಿದುದನ್ನು ಅವರಿಂದ ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ ; ಅವರ ಮೇಲೆ ಅಮಾನುಷ ರೀತಿಯಲ್ಲಿ ಹಿಂಸಾಚಾರವನ್ನು ನಡೆಸಲಾಗಿತ್ತು.

ಅದು ಅಂದಿನ ದುರ್ಘಟನೆ ; ಈಗಲಾದರೂ ದಿಲ್ಲಿಯ ದೇವತೆಗಳಿಗೆ ತಮ್ಮ ತಪ್ಪಿನ ಅರಿವಾಗಿದೆಯೇ ? ಜೋಡೆತ್ತಿನ ಬದಲಾಗಿದನಕರುಗಳು ಬಂದಿನೆಯಾದರೂ ಗೋಮಾತೆಯ ಗೋಳು ನಿಂತಿರುವುದಿಲ್ಲ ; ಆಕೆಯ ರಕ್ಷಣೆ ಕುರಿತು ಯೋಚಿಸುವವರಾರೂ ಇಲ್ಲ ; ಅವಳ ಚಿತ್ರವನ್ನು ತೋರಿಸಿ ಅಧಿಕಾರಕ್ಕೆ ಬರಲು ಮಾನಸ್ಸಿದೆಯೇ ವಿನಃ ಗೋಹತ್ಯೆಯನ್ನು ಪ್ರತಿಬಂಧಿಸುವ ಗೋಭಕ್ತರಾರೂ ಕಂಡುಬರುತ್ತಿಲ್ಲ.

ಇನ್ನಾದರೂ ಗೋಹತ್ಯೆ ಕೂಡಲೇ ಪ್ರತಿಬಂಧಿಸಲ್ಪಡಲಿ. — ಶಿವಶಂಕರ

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ



Quality Printing Neat Binding

Lakshminarasimha Press

Sivarampet, Mysore 1

Help The Gorakshana

— Humanitarian Propoganda Monthly —

ವುಡ್‌ಲಾಂಡ್ 6 12 74 ರಿಂದ

ಅಮೋಘ 15 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ 4 ಪ್ರದರ್ಶನಗಳು

ಅ ಪೆ ರಾ 29 11 74 ರಿಂದ

ಪಾತಾಳ ಭೈರವಿ

ಎನ್ ಟಿ ರಾಮರಾವ್ ರೇಲಂಗಿ ಗಿರಿಜ ಇವರ ಅಭಿನಯದಿಂದ ಕೂಡಿದ
ಅಮೋಘ ತೆಲುಗು ಚಿತ್ರ

ದಿನ 3 ಪ್ರದರ್ಶನಗಳು

S H A K T I

S U D H A

A Superb Tonic

Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satvavadi Press, Chamar- ... Mysore